1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 1504 /2023 ಚಾಸಾಃ(1) ಪ್ರಾಸಾ (1 )

ದಿನಾಂಕಃ **24-03-2026** ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಫಕೀರಪ್ಪ |
| ತಂದೆ ಹೆಸರು | ದೇವೆಂದ್ರಪ್ಪ ಹೂಗಾರ |
| ವಯಸ್ಸು | 39 ವರ್ಷ, |
| ಉದ್ಯೋಗ | ಪೇಂಟಿಂಗ ಕೆಲಸ |
| ವಾಸಸ್ಥಳ | ಚುಕ್ಕನಕಲ್ಲ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ಮೃತ ರಂಜಿತ ನನ್ನ ಹೆಂಡತಿ. ಚಾಸಾ-3 ರಿಂದ 5 ರವರ ಪರಚಯವಿದೆ. ಆರೋಪಿಯ ಪರಿಚಯ ನನಗೆ ಇರುವುದಿಲ್ಲ. ನನ್ನ ಹೆಂಡತಿ ಹೇಗೆ ಮೃತ ಹೊಂದಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ. ನಾನು ಯಾವುದೇ ದೂರನ್ನು ದಾಖಲಿಸಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಸದರಿ ದಾಖಲಾತಿ ದೂರು ಆಗಿದ್ದು ಅದರಲ್ಲಿನ ತಮ್ಮ ಸಹಿ ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು ಸಾಕ್ಷಿ ಸಹಿ ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲಾತಿ ತೋರಿಸಲಾಗಿ ಸದರಿ ದಾಖಲಾತಿ ಪಂಚನಾಮೆ ಆಗಿದ್ದು ಅದರಲ್ಲಿನ ತಮ್ಮ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿ ಸಹಿ ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ 2 ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ತಾನು ಇರುವುದಾಗಿ ಗುರುತಿಸಿದ್ದು ಸದರಿ ಪೋಟೋಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು, ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 19-3-2023 ರಂದು ಸಂಜೆ 6 ಕ್ಕೆ ನಾನು ಮನೆಯಲ್ಲಿದ್ದಾಗ ಚಾಸಾ-3 ರವರು ನನಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದೇನೆಂದರೆ ಸಾಯಂಕಾಲ 5-30 ಕ್ಕೆ ಚಾಸಾ-3, 4 ಮತ್ತು ಮೃತ ನನ್ನ ಹೆಂಡತಿ ಮೂವರು ಸೇರಿಕೊಂಡು ಕೊಪ್ಪಳದಿಂದ ಮುದ್ದಾಬಳ್ಳಿಗೆ ಹೋಗುವ ರಸ್ತೆಯಲ್ಲಿ ಅಟೋ ಕಾಯುತ್ತಾ ನಿಂತಿದ್ದಾಗ ಆಗ ಕೆಎ-37/ಬಿ-5274 ಪಾಸೆಂಜರ ಅಟೋದಲ್ಲಿ ಸದರಿ 3 ಜನ ಹತ್ತಿಕೊಂಡು ಸ್ವಲ್ಪ ದೂರ ಬಂದಾಗ ಆರೋಪಿ ಸದರಿ ಅಟೋವನ್ನು ಅತೀವೇಗ ಮತ್ತ ಅಜಾಗರೂಕತೆಯಿಂದ

ತಗ್ಗುದಿಣ್ಣೆ ನೋಡದೇ ಚಲಾಯಿಸಿದ್ದರಿಂದ ನಿಧಾನವಾಗಿ ಚಲಾಯಿಸಿ ಎಂದು ಹೇಳಿದರೂ ಕೇಳದೇ ಅತೀವೇಗವಾಗಿ ಆಟೋವನ್ನು ಚಲಾಯಿಸಿದ್ದು ಮೃತ ನನ್ನ ಹೆಂಡತಿ ಆಯತಪ್ಪಿ ಪುಟಿದ್ದು ಕೆಳಗೆ ಬಿದ್ದಿದ್ದು ಚಾಸಾ-3 ರವರು ನೋಡಿ ನನಗೆ ತಿಳಿಸಿದ್ದು ನಾನು ಸ್ಥಳಕ್ಕೆ ಬಂದೆ ಅಂದರೆ ಸರಿಯಲ್ಲ. ನಂತರ ಗಾಯಾಳು ನನ್ನ ಹೆಂಡತಿಯನ್ನು ಕೊಪ್ಪಳದ ಜಿ ಎಸ್ ಆರ್ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆಂದರೆ ಸರಿಯಲ್ಲ. ಅಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಕೊಪ್ಪಳ ಕೆ ಎಸ್ ಆಸ್ಪತ್ರೆಗೆ ಸಲಹೆ ನೀಡಿದ್ದರಿಂದ ಅಲ್ಲಿ ದಾಖಲಿಸಿ ನಂತರ ಪುನಃ ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿರುತೇನೆಂದರೆ ಸರಿಯಲ್ಲ. ಜಿಲ್ಲಾ ಆಸ್ಪತ್ರೆಯವರು ಕಿಮ್ಸ್ ಆಸ್ಪತ್ರೆ ಹುಬ್ಬಳಿಗೆ ಹೋಗಲು ತಿಳಿಸಿದು ಅದೆ ದಿನ 11-30 ಕ್ಕೆ ಹುಬ್ಬಳ್ಳಿಯಲ್ಲಿ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ದಿಃ 22-3-2023 ರಂದು ಸಂಜೆ 6 ಗಂಟೆಗೆ ಚಿಕಿತ್ಸೆ ಫಲಿಸದೇ ನನ್ನ ಹೆಂಡತಿ ಮೃತಪಟ್ಟಿರುತ್ತಾಳೆ ಅಂದರೆ ಸರಿಯಲ್ಲ. ದಿಃ 23-3-2023 ರಂದು ನಿಪಿ-1 ರಂತೆ ದೂರು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಅದೇದಿನ ಬೆಳಿಗ್ಗೆ 10-30 ರಿಂದ 11-30 ರ ಸಮಯಿದಲಿ ಸ್ಥಳ ಪಂಚನಾಮೆ ಮಾಡಿ ಆಟೋ ಅಮಾನತ್ತು ಪಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಮತ್ತು ನಿಪಿ-3 ಮತ್ತು 4 ರಂತೆ ಪೋಟೋ ತೆದಿದ್ದಾರೆಅಂದರೆ ಸರಿಯಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗಳಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ**

ಏನೂ ಇಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.